ವಾಣಿಜ್ಯ ತೆರಿಗೆಗಳ ಇಲಾಖೆ

ಸಂಖ್ಯೆ: ಡಬ್ಲ್ಯೂ.ಪಿ. 33287/2016–'17

ವಾಣಿಜ್ಯ ತೆರಿಗೆ ಆಯುಕ್ತರವರ ಕಛೇರಿ,
ವಾಣಿಜ್ಯ ತೆರಿಗೆ ಕಾರ್ಯಾಲಯ,
ಬೆಂಗಳೂರು–560 009.
ದಿನಾಂಕ: 25–05–2017.

**ಸುತ್ತೋಲೆ ಸಂ: 3/2017–'18**

**ವಿಷಯ:** ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಡಬ್ಲ್ಯೂ.ಪಿ. ಸಂಖ್ಯೆ 33287/2016 ಪ್ರಕರಣದಲ್ಲಿ ದಿನಾಂಕ 28–04–2017 ರಂದು ನೀಡಿದ ನಿರ್ದೇಶನದಂತೆ ಬಾಕಿ ಇರುವ ಪರಿಷ್ಕರಣೆ ಮತ್ತು ಮನವಿ ಪ್ರಕರಣಗಳನ್ನು ಶೀಘ್ರಗತಿಯಲ್ಲಿ ವಿಲೇವಾರಿ ಆಗುವಂತೆ ಸಂಬಂಧಪಟ್ಟ ಅಧಿಕಾರಿಗಳ ಕಾರ್ಯನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡಲು ಮೇಲುಸ್ತುವಾರಿ ಕೋಶ (Monitoring Cell) ವನ್ನು ರಚಿಸುವ ಬಗ್ಗೆ.

ದಿನಾಂಕ 31.03.2017 ರಂತೆ ಇಲಾಖೆಯಲ್ಲಿ ಪರಿಷ್ಕರಣೆ ಮತ್ತು ಮನವಿ ಹಂತದಲ್ಲಿ 4656 ಪ್ರಕರಣಗಳು ವಿಲೇವಾರಿಗೆ ಬಾಕಿ ಇರುತ್ತವೆ. ಇವುಗಳಲ್ಲಿ 5 ವರ್ಷಕ್ಕಿಂತ ಹೆಚ್ಚಿನ ಹಳೆಯ ಒಟ್ಟು 250 ಪ್ರಕರಣಗಳು, 2 ರಿಂದ 5 ವರ್ಷದೊಳಗಿನ ಒಟ್ಟು 823 ಪ್ರಕರಣಗಳು, 1 ರಿಂದ 2 ವರ್ಷದೊಳಗಿನ 1072 ಪ್ರಕರಣಗಳು, 6 ತಿಂಗಳಿನಿಂದ 1 ವರ್ಷದೊಳಗಿನ 1089 ಪ್ರಕರಣಗಳು ಹಾಗೂ 6 ತಿಂಗಳುಗಳ ಒಳಗಿನ 1422 ಪ್ರಕರಣಗಳು ವಿಲೇವಾರಿಗಾಗಿ ಬಾಕಿ ಇರುತ್ತವೆ. ಈ ಪ್ರಕರಣಗಳಲ್ಲಿ ಒಳಗೊಂಡ ಒಟ್ಟು ಮೊತ್ತ ರೂ. 3425 ಕೋಟಿ ಇದ್ದು, ಇವುಗಳಲ್ಲಿ ಮುಖ್ಯವಾಗಿ ಮೆ. ಬಿ.ಇ.ಎಲ್, ಬೆಂಗಳೂರು ಪ್ರಕರಣದಲ್ಲಿ ರೂ. 903 ಕೋಟಿ, ಮೆ. ಓಬಳಾಪುರಂ ಮೈನಿಂಗ್ ಕಂಪನಿ, ಬಳ್ಳಾರಿ ಪ್ರಕರಣದಲ್ಲಿ ರೂ. 641 ಕೋಟಿ, ಮೆ. ಡೆಲ್ ಇಂಡಿಯಾ ಪ್ರಕರಣದಲ್ಲಿ ರೂ. 128 ಕೋಟಿ (ತಡೆಯಾಜ್ಞೆ ಇದೆ), ಮೆ.ಪಾನ್ ಪಾರಾಗ್ ಇಂಡಿಯಾ ಲಿ., ಬೆಂಗಳೂರು ಪ್ರಕರಣದಲ್ಲಿ ರೂ. 37 ಕೋಟಿ ಮತ್ತು ಮೆ. ಸ್ವಸ್ತಿಕ್ ಮಿನರಲ್ಸ್, ಬಳ್ಳಾರಿ ಪ್ರಕರಣದಲ್ಲಿ ರೂ. 32 ಕೋಟಿ (ಈ 5 ಪ್ರಕರಣಗಳಲ್ಲಿ ಒಟ್ಟು ರೂ. 1741 ಕೋಟಿ) ಇರುವುದು ಕಂಡು ಬಂದಿರುತ್ತದೆ.

ಮೇಲೆ ನಮೂದಿಸಿದ ಒಟ್ಟು 4656 ಪ್ರಕರಣಗಳ ಪೈಕಿ 903 ಪ್ರಕರಣಗಳಲ್ಲಿ ಮಾತ್ರ ತಡೆಯಾಜ್ಞೆ ನೀಡಲಾಗಿದ್ದು, ಇಂತಹ ತಡೆಯಾಜ್ಞೆ ಪ್ರಕರಣಗಳಲ್ಲಿ ಒಳಗೊಂಡಿರುವ ಒಟ್ಟು ಮೊತ್ತ ರೂ. 655 ಕೋಟಿ ಆಗಿರುತ್ತದೆ. ಇನ್ನುಳಿದ 3753 ಪ್ರಕರಣಗಳಲ್ಲಿ ಒಳಗೊಂಡಿರುವ ಒಟ್ಟು ರೂ. 2770 ಕೋಟಿ ಮೊತ್ತದ ಮೇಲೆ ಯಾವುದೇ ತಡೆಯಾಜ್ಞೆ ಇಲ್ಲದಿರುವುದು ಕಂಡು ಬರುತ್ತದೆ. ಈ ತಡೆಯಾಜ್ಞೆ ಇಲ್ಲದ ಪ್ರಕರಣಗಳ ಪೈಕಿ ರೂ. 173.00 ಕೋಟಿ ತೆರಿಗೆಯನ್ನು ಸಂಗ್ರಹಿಸಿದ್ದು, ಇನ್ನೂ ರೂ. 2597 ಕೋಟಿ ಬಾಕಿ ತೆರಿಗೆಯನ್ನು ವಸೂಲಿ ಮಾಡಲು ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳು ವಸೂಲಿ ಕ್ರಮವನ್ನು ಕೈಗೊಂಡಿದ್ದರೂ ಕೂಡ ಪರಿಣಾಮಕಾರಿಯಾಗಿ ಆ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕಾಗಿರುತ್ತದೆ.